# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**–ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ಅಧೀನದಲ್ಲಿರುವ ಭೂಗುಣ ತಂತ್ರ ವಿಜ್ಞಾನ ಶಾಖೆಗೆ Bolero Camper PS & WD BS IV ವಾಹನವನ್ನು ಖರೀದಿಸುವ ಕುರಿತು.

* * *

**ಓದಲಾಗಿದೆ :–**

1) ನಿರ್ದೇಶಕರು, ಕ.ಇಂ.ಸಂ.ಕೇಂದ್ರ, ಕೆ.ಆರ್.ಸಾಗರ ಇವರ ಪತ್ರ ಸಂ:ನಿರ್ದೇಶಕರು/ಕೆಇಆರ್ಎಸ್/ಕಿ.ಇಂ/ವಾಹನ ಖರೀದಿ/5229–31/2017–18, ದಿನಾಂಕ:18–01–2018
2) ನಿರ್ದೇಶಕರು, ಕ.ಇಂ.ಸಂ.ಕೇಂದ್ರ, ಕೆ.ಆರ್.ಸಾಗರ ಇವರ ಪತ್ರ ಸಂಖ್ಯೆ:ನಿರ್ದೇಶಕರು/ಕೆಇಆರ್ಎಸ್/ಕಿ.ಇಂ/ವಾಹನ ಖರೀದಿ/2238–40/2018–19, ದಿನಾಂಕ:06–08–2018.

**ಪ್ರಸ್ತಾವನೆ :–**

ಮೇಲೆ ಓದಲಾದ (1) ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಸಾಗರ ಇವರು ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ಅಧೀನದಲ್ಲಿರುವ ಭೂಗುಣ ತಂತ್ರ ವಿಜ್ಞಾನ ಶಾಖೆ–2ಗೆ ಒಂದು ಹೊಸ Mahindra Bolero Camper PS 4WD BS4 ವಾಹನಕ್ಕೆ ತೆರಿಗೆ ಹೊರತುಪಡಿಸಿ ರೂ.6,01,594/– (GeM) ಗಳಿಗೆ ಖರೀದಿಸಲು ಹಾಗೂ ಸದರಿ ಪ್ರಸ್ತಾಪಿಸಿರುವ ವಾಹನದ ಇಂಧನ ಮಿತವ್ಯಯ ಹಾಗೂ ನಿರ್ವಹಣಾ ವೆಚ್ಚ ಕಡಿಮೆ ಇರುವ್ಯದರಿಂದ ಸಂಶೋಧನಾ ಕೇಂದ್ರದ ಹಿತದೃಷ್ಟಿಯಿಂದ ಅಧ್ಯಯನಗಳನ್ನು ನಡೆಸಲು ಅನುವಾಗುವಂತೆ ವಾಹನ ಖರೀದಿಸಲು ಅನುಮತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಮೇಲೆ ಓದಲಾದ (2) ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಸಾಗರ ಇವರು ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ಅಧೀನದಲ್ಲಿರುವ ಭೂಗುಣ ತಂತ್ರ ವಿಜ್ಞಾನ ಶಾಖೆ–2ಗೆ ಒಂದು ಹೊಸ TATA Xenon Crew Cab 3.01 Dicor ವಾಹನವನ್ನು ಖರೀದಿಸುವ ಸಂಬಂಧ ಕೋರಿರುವ ಮಾಹಿತಿಗಳನ್ನು ಸಲ್ಲಿಸುತ್ತಾ, ಸದರಿ ಶಾಖೆಯು ಸಹಾ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರಕ್ಕೆ ನಿಗದಿಪಡಿಸಿರುವ 3ನೇ ವ್ಯಕ್ತಿ ಗುಣ ನಿಯಂತ್ರಣ ಪರೀಕ್ಷೆ ನಡೆಸಲು ಇರುವುದರಿಂದ ಸದರಿ ವಾಹನವು ಅತ್ಯಾವಶ್ಯವಾಗಿರುವುದರಿಂದ ಹಾಗೂ ಸಂಶೋಧನಾ ಕೇಂದ್ರ ಹಿತದೃಷ್ಟಿಯಿಂದ ಅಧ್ಯಯನಗಳನ್ನು ನಡೆಸಲು ಅನುಕೂಲವಾಗುವಂತೆ ವಾಹನವನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ.

## ಸರ್ಕಾರದ ಆದೇಶ ಸಂಖ್ಯೆ:ಜಸಂಇ 23 ಎನ್‌ಪಿಸಿ 2017, ಬೆಂಗಳೂರು, ದಿನಾಂಕ:01–01–2019

ಸಿ.ಆ.ಸು ಇಲಾಖೆಯ ನಿಯಮಗಳನ್ವಯ ಹಳೆಯ ವಾಹನವನ್ನು ವಿಲೇಗೊಳಿಸುವ ಷರತ್ತಿಗೆ ಒಳಪಡಿಸಿ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ಆಧೀನದಲ್ಲಿರುವ ಭೂಗುಣ ತಂತ್ರ ವಿಜ್ಞಾನ ಶಾಖೆಗೆ ರೂ.6.50 ಲಕ್ಷಗಳ (Ex Show Room Rate) ಆರ್ಥಿಕ ಮಿತಿಯಲ್ಲಿ 01 ಹೊಸ Bolero Camper PS & WD BS IV ವಾಹನವನ್ನು ಖರೀದಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಸದರಿ ವಾಹನ ಖರೀದಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2701-80-003-0-01-059-ಇತರೆ ಖರ್ಚುಗಳಡಿ ಭರಿಸತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 499 ಆಕೋ-1/2018, ದಿನಾಂಕ:27.11.2018 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಲೋ.ಇ. (ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ
5. ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ
6. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಕೇಂದ್ರ ಮುಖ್ಯ ಗೋಪುರ, ಬೆಂಗಳೂರು
7. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
8. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು/ಮೈಸೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಗಳಿಗೆ, ಜಲಸಂಪನ್ಮೂಲ ಇಲಾಖೆ
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು